ಅದೇನು ಸಿಟ್ಟಿತ್ತೋ ಅವರ ಮೇಲೆ? ಆ ಕಾಗೆಯಿಂದ ತಪ್ಪಿಸಿಕೊಳ್ಳಲು ಅವರು ಪಟ್ಟ ಪಾಡು ಅಷ್ಟಿಷ್ಟಲ್ಲ. ಜಪಾನಿನಲ್ಲಿ ಕಾಗೆಯ ಈ ಗುಣವನ್ನು ಕುರಿತು ಒಂದು ಪ್ರಯೋಗ ಮಾಡಲಾಯಿತು. ಗುಹಾಮಾನವ ಮತ್ತು ಡಿಕ್ ಚೆನೆ ಎಂಬ ಎರಡು ರೀತಿಯ ಹ್ಯಾಲೊವಿನ್ ಮುಖವಾಡಗಳನ್ನು ಧರಿಸಿ ಕಾಗೆಗಳ ಮುಂದೆ ಹೋಗಲಾಯಿತು. ಗುಹಾಮಾನವನ ಮುಖವಾಡ ಧರಿಸಿದ್ದವರು ಕಾಗೆಗಳನ್ನು ಹೆದರಿಸುತ್ತಿದ್ದರೆ, ಚೆನೆ ಮುಖವಾಡದವರು ಅವರನ್ನು ಹತೋಟಿಯಲ್ಲಿಡುವಂತೆ ವರ್ತಿಸುತ್ತಿದ್ದರು. ಗುಹಾಮಾನವನ ಮುಖವಾಡದವರು ಕೆಲವು ಕಾಗೆಗಳನ್ನು ಹಿಡಿಯಲು ಯತ್ನಿಸುತ್ತಿದ್ದಂತೆ ಕಾಗೆಯೊಂದು ಹೆದರಿಸುವ ಸ್ವರದಲ್ಲಿ ಕೂಗಿತು. ಇದನ್ನು ಕಂಡು ಅಲ್ಲೇ ಇದ್ದ ಇನ್ನೊಂದು ಕಾಗೆ ಮೊದಲನೆಯದರ ಜೊತೆ ಸೇರಿ ಅಪರಿಚಿತ ವ್ಯಕ್ತಿಯನ್ನು ಹೆದರಿಸಲು ಆರಂಭಿಸಿತು. ಮುಂದೆ ಕೆಲವು ವರ್ಷಗಳವರೆಗೆ ಗುಹಾಮಾನವನ ಮುಖವಾಡವನ್ನು ಕಂಡೊಡನೆ ಆ ಜಾಗದಲ್ಲಿದ್ದ ಕಾಗೆಗಳು ವಿಚಿತ್ರವಾದ ಕರ್ಕಶ ಧ್ವನಿಯಲ್ಲಿ ಕೂಗುತ್ತಾ ದಾಳಿ ಮಾಡುತ್ತಿದ್ದವಂತೆ! ನೋಡಿ, ಜನರ ನಂಬಿಕೆಯ ಪ್ರಕಾರ ಹಾವು ಮಾತ್ರ ಹನ್ನೆರಡು ವರ್ಷ ದ್ವೇಷ ಸಾಧಿಸುತ್ತದೆ. ಆದರೆ, ಕೆಲವೊಮ್ಮೆ ಕಾಗೆಯೂ ಅದಕ್ಕೆ ಹೊರತಲ್ಲ ಎಂಬುದೂ ಅಷ್ಟೇ ನಿಜ.



ಕಾಗೆಯ ಬಗ್ಗೆ ಕುತೂಹಲ ಮೂಡಿದ್ದು ಬಹುಶಃ ಬಾಲ್ಯದಿಂದಲೇ ಕೇಳುತ್ತಿದ್ದ / ಓದುತ್ತಿದ್ದ ಕತೆಗಳಿಂದ ಎಂದೆನಿಸುತ್ತದೆ. ಒಂದು ಮೂಲೆಯಲ್ಲಿ ಕುಳಿತು ಉಗುರು ಕಚ್ಚುತ್ತಾ, ಯಾರು ಕರೆದರೂ ಕೇಳದಂತೆ, 'ಚಂದಮಾಮ'ದಲ್ಲಿ ಓದುತ್ತಿದ್ದ ಪಂಚತಂತ್ರ ಕಥೆಗಳಲ್ಲಿ ಕಾಕೋಲೂಕೀಯ ಎಂಬ ಕಾಗೆಯ ಕಥೆಗಳು ಬಲು ಸ್ವಾರಸ್ಯಕರವಾಗಿರುತ್ತಿದ್ದವು. ಈ ಕಥೆಗಳಲ್ಲಿ ಕಾಗೆಯ ಅತಿ ಬುದ್ಧಿವಂತಿಕೆ ಕಂಡು ನಾವೆಲ್ಲಾ ಆಶ್ಚರ್ಯ ಪಡುತ್ತಿದ್ದೆವು. ತಮ್ಮನ್ನು ತಾವು ಉಳಿಸಿಕೊಳ್ಳಲು ಪಕ್ಷಿಗಳು ಎಂತೆಂತಹಾ ಉಪಾಯಗಳನ್ನು ಕಂಡುಕೊಳ್ಳುತ್ತವೆ!

ಕಾಗೆ ಶುಭವೋ ಅಶುಭವೋ ಎಂಬುದರ ಬಗ್ಗೆ ಹಲವರಲ್ಲಿ ಗೊಂದಲವಿದೆ. ಭಾರತೀಯ